ಕಲಾಪಗಳಲ್ಲಿ ಭಾಗವಹಿಸುವುದೇ ಇರಬಹುದು, ಸದನದ ಒಳಗಡೆ ಅಥವಾ ಹೊರಗಡೆಯು ವಿಚಾರವೇ ಇರಬಹುದು ನಿರ್ಭಯವಾಗಿ ತನ್ನ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಯಾವ ಸದಸ್ಯರಿಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ಒಂದು ವೇಳೆ ''ಇಲ್ಲ ಸಂದರ್ಭ ಹಾಗೆ ಇತ್ತು. ಬಾಯಿತಪ್ಪಿ ಈ ಮಾತು ಬಂತು'' ಎನ್ನುವುದಾದರೆ ಆ ಪ್ರಶ್ನೆ ಬೇರೆ. ಆದರೆ ಅವರು ಒಂದು ಮಾನಸಿಕವಾದಂಥ ಮನೋ ಭೂಮಿಕೆಯನ್ನು ಸಿದ್ಧಮಾಡಿ ಈ ಮಾತನ್ನು ಹೇಳಿರತಕ್ಕಂಥ ಧಾಟಿ ಪ್ರಜಾಪ್ರಭುತ್ವದ ನೀತಿಗೆ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿರುವ ಮೌಲ್ಯಗಳಿಗೆ ಅನುಗುಣವಾಗಿ ಇದೆಯೇ ಎನ್ನುವುದು ಇಲ್ಲಿನ ಪ್ರಶ್ನೆ. ಇದು ಮುಖ್ಯಮಂತ್ರಿಗಳ ಬಾಯಿಂದ ಬಂದ ಹೇಳಿಕೆಯಲ್ಲ. ಇದನ್ನು ಯಾರೂ ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ನಮಗೆ ಇರತಕ್ಕಂಥ ಹಕ್ಕುಗಳೇನು ? ನಿರ್ಭೀತವಾಗಿ ನಾವು ಕೆಲಸ ಮಾಡಬೇಕು. ಈ ಸದನದ ಸದಸ್ಯರಿಗೆ ಅದು ಸಾಧ್ಯವಾಗುವುದಿಲ್ಲ. ಇಂತಹ ಬೆದರಿಕೆಯ ವಾತಾವರಣದಲ್ಲಿ ನಾವು ಕೆಲಸ ಮಾಡಬೇಕಾದಂಥ ಪರಿಸ್ಥಿಯಲ್ಲಿ ಮುಖ್ಯಮಂತ್ರಿಗಳು ಇದರ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ಕೊಡಬೇಕು. ಇಲ್ಲಿ ನಮ್ಮ ಹಕ್ಕಿಗೆ ಚ್ಯುತಿಯಾಗಿರುವುದರಿಂದ ಹಕ್ಕುಭಾದ್ಯತಾ ಸಮಿತಿಗೆ ಇದನ್ನು ಒಪ್ಪಿಸಬೇಕು. ಮತ್ತು ಇದರ ಬಗ್ಗೆ ಚರ್ಚೆ ಆಗಬೇಕು. ಯಾವ ಉದ್ದೇಶದಿಂದ ಸದನದಲ್ಲಿ ಈ ಹೇಳಿಕೆಯನ್ನು ಕೊಟ್ಟರು ? ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಆಗಬೇಕಾಗುತ್ತದೆ. ಈ ಸಭೆಯ ಮಾನ್ಯ ಸದಸ್ಯರಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿ ಈ ಸದನಕ್ಕೆ ಇರುವುದರಿಂದ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಈ ನಿರ್ಣಯವನ್ನು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಿಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನಿಯಮಾವಳಿ ೩೧೨ರ ಪ್ರಕಾರ ಮೇಲ್ಮನೆಯಲ್ಲಿ ನಡೆದಂತಹ ಚರ್ಚೆಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಷಯಗಳನ್ನು, ಮೇಲ್ಮನೆಯಲ್ಲಿ ನಡೆದ ವಿಷಯಗಳನ್ನು ತೆಗೆದುಕೊಂಡು ಹಕ್ಕುಭಾದ್ಯತಾ ಸಮಿತಿಗೆ ಒಪ್ಪಿಸಬೇಕು ಎಂದು ಹೇಳಿ ತಾವೇನು ವಾದವನ್ನು ಮುಂಡನೆ ಮಾಡಿದ್ದೀರಿ, ನಾನು ನಮ್ಮ ನಿಯಮದ ವ್ಯಾಪ್ತಿಯನ್ನು ಆಲೋಚನೆ ಮಾಡಿ ಇದು ಹಕ್ಕು ಚ್ಯುತಿ ವ್ಯಾಪ್ತಿಯ ಒಳಗಡೆ ಬರುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗಿರುವುದರಿಂದ ಈ ವಿಷಯವನ್ನು ತಡೆಹಿಡಿದಿದ್ದೇನೆ.

(I) ಗಮನ ಸೆಳೆಯುವ ಸೂಚನೆ

ನಂಜನಗೂಡು ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ಬೆಳೆಗಳಿಗೆ ಉಂಟಾದ ಹಾವಳಿ ಬಗ್ಗೆ

ಶ್ರೀ ಎಂ. ಮಹದೇವ್ (ನಂಜನಗೂಡು).—ನಂಜನಗೂಡು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಆನೆಗಳ ಹಾವಳಿಯಿಂದ ಬೆಳೆಗಳಿಗುಂಟಾದ ನಷ್ಟದ ವಿಚಾರವನ್ನು ಅರಣ್ಯ ರಾಜ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—ನನ್ನ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ ೫-೧೨-೮೩ ರಂದು ಶ್ರೀ ಪಟೇಲ್ ಚೆನ್ನಪ್ಪ ಬೀಪೆ ಸಾರಗಪುರ, ನಂಜನಗೂಡು ಇವರಿಂದ ಕಾಡಾನೆ ತೆಂಗಿನ ತೋಟಕ್ಕೆ ನುಗ್ಗಿ ತೆಂಗಿನ ಮರಗಳನ್ನು ಹಾಳು ಮಾಡುತ್ತಿರುವುದರ ಬಗ್ಗೆ ಬಂದ ತಂತಿ ವರ್ತಮಾನ ಬಂದಮೇಲೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯ ಜೀವಿ ಸಂರಕ್ಷಣೆ ವಿಭಾಗ, ಮೈಸೂರು ಹಾಗೂ ವನ್ಯ ಪ್ರಾಣಿ ಸಂರಕ್ಷಣಾಧಿಕಾರಿ, ಮೈಸೂರು, ಅಧಿಕಾರಿಗಳು, ಸರಗೂರು ಇವರಿಗೆ ಕಾಡಾನೆಗಳನ್ನು ಆದಷ್ಟು ಜಾಗ್ರತೆ ಕಾಡಿಗೆ ಅಟ್ಟಲು ತಿಳಿಸಿದರ ಮೇರೆಗೆ ಸಹಾಯಕ ಅರಣ್ಯಾಧಿಕಾರಿ, ವನ್ಯ ಜೀವಿ ಉಪ ವಿಭಾಗ, ಮೈಸೂರು ಇವರು ಅಂದೇ ಸ್ಥಳಕ್ಕೆ ಇವರ ಸಿಬ್ಬಂದಿಯೊಂದಿಗೆ ಧಾವಿಸಿ ಆನೆಗಳನ್ನು ಕಾಡಿಗೆ ಅಟ್ಟಲು ಎಲ್ಲಾ ಏರ್ಪಾಡುಗಳನ್ನು ಮಾಡಿದ್ದಾರೆ. ಅಲ್ಲದೆ ವಲಯ ಅರಣ್ಯಾಧಿಕಾರಿ, ಅಂತರಸಂತೆ ಹಾಗೂ ಇವರ ಸಿಬ್ಬಂದಿಗೆ ಮುಂದೆ ಆನೆಗಳನ್ನು ತೋಟಕ್ಕೆ ಹಾಗೂ ಊರಿಗೆ ಪ್ರವೇಶಿಸದಂತೆ ನೋಡಿಕೊಳ್ಳಲು ಸಹಾಯ ಅರಣ್ಯಾಧಿಕಾರಿ, ವನ್ಯ ಜೀವಿ ಸಂರಕ್ಷಣೆ ವಿಭಾಗದವರು ಆದೇಶವನ್ನು ನೀಡಿ ಎಲ್ಲಾ ರೀತಿಯಿಂದಲೂ ಆನೆಗಳಿಂದ ನಷ್ಟವಾಗದಂತೆ ತಡೆಗಟ್ಟಿದ್ದಾರೆ. ಫಸಲು ಹಾಳು ಮಾಡಿದ ಬಗ್ಗೆ ಇಲ್ಲಿಯವರೆಗೂ ಯಾವ ರೀತಿಯ ವರದಿಗಳು ವಲಯ ಅರಣ್ಯಾಧಿಕಾರಿಗಳಿಂದ ಬಂದಿರುವುದಿಲ್ಲ. ವಿವರವಾದ ಮಾಹಿತಿಯನ್ನು ವಲಯ ಅರಣ್ಯಾಧಿಕಾರಿ,

ಸರಗೂರು ರವರಿಂದ ಬಂದ ಮೇಲೆ ಮುಂದೆ ಪರಿಹಾರ ಧನ ಕೊಡಲು ವಿಪರ್ಸಾಡು ಮಾಡಲಾಗುತ್ತದೆ. ಇದಲ್ಲದೆ ಇನ್ಯಾವುದೇ ಕಾಡಾನೆಗಳಿಂದ ಹಾವಳಿಯಾಗಿರುವುದರ ಬಗ್ಗೆ ವರದಿಗಳು ಬಂದಿರುವುದಿಲ್ಲ.

ಇದರ ಜೊತೆಗೆ ಇನ್ನಷ್ಟು ಮಾಹಿತಿಗಳನ್ನು ಹೇಳುವುದಾದರೆ, ನಂಜನಗೂಡಿನಲ್ಲಿ ಕಳೆದ ೧೯೮೩-೮೪ ರಲ್ಲಿ ಕರೀಫ್ ರಬಿ ಫಸಲಿಗೆ ಸಂಬಂಧಪಟ್ಟಂತೆ ೬೯ ಪ್ರಕರಣಗಳಲ್ಲಿ ೩೧,೫೧೬ ರೂಪಾಯಿಗಳ ಪರಿಹಾರ ಧನವನ್ನು ಕೊಡಲಾಗಿದೆ. ಮತ್ತು ಇನ್ನು ಕೆಲವು ಪ್ರಕರಣಗಳಲ್ಲಿ ೬,೨೬೦ ರೂಪಾಯಿಗಳ ಪರಿಹಾರವನ್ನು ಕೊಡಬೇಕಾಗಿದೆ. ಆನೆಗಳ ಹಾವಳಿಯನ್ನು ತಡೆಗಟ್ಟಲು ೪೦ ವಾಚರ್‌ಗಳ ನೇಮಕಾತಿಯನ್ನು ಮಾಡಿಕೊಂಡಿದ್ದಾರೆ.

ಶ್ರೀ ಎಂ. ಮಹಾದೇವ್.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಈ ವನ್ಯಮೃಗಗಳ ಹಾವಳಿಯಿಂದಾಗಿ ಜನರು ಜೀವನ ಮಾಡುವುದಕ್ಕೆ ಕಷ್ಟವಾಗಿದೆ. ನೂರಾರು ಜನರು ನಂಜನಗೂಡಿಗೆ ಬಂದು ಮನವಿ ಸಲ್ಲಿಸುತ್ತಿದ್ದಾರೆ. ಸುಮಾರು ಒಂಬತ್ತು ಹಳ್ಳಿಗಳಲ್ಲಿ ಈ ಕಾಡಾನೆಗಳ ಹಾವಳಿಯಿದ್ದು ಅವುಗಳ ಪಟ್ಟಿಯನ್ನು ಸಂಬಂಧಪಟ್ಟವರಿಗೆ ಕಳಿಸಿಕೊಟ್ಟಿದ್ದೇನೆ. ಇಲ್ಲಿ ಒಂದು ಗ್ರಾಮದಲ್ಲಿ ಒಬ್ಬ ವ್ಯಕ್ತಿ ಬರುತ್ತಿರುವಾಗ ಎರಡು ಕಾಡಾನೆಗಳು ಬಂದು ಆತನ ಕಾಲನ್ನು ತುಳಿದಿವೆ. ಆ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸಿದಾಗ ಆತನ ಕಾಲನ್ನು ಕತ್ತರಿಸಿದ್ದಾರೆ. ಹುಲಿಯೊಂದು ಆಡ್ಯಾ ಗ್ರಾಮಕ್ಕೆ ಬಂದು ಒಬ್ಬ ವ್ಯಕ್ತಿಯನ್ನು ಗಾಯಗೊಳಿಸಿ ಒಂದು ಎಮ್ಮೆಯನ್ನು ಆಹುತಿ ತೆಗೆದುಕೊಂಡಿದೆ. ಈ ವಿಷಯವನ್ನು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಪತ್ರ ಮುಖೇನ ಕಳಿಸಿಕೊಟ್ಟಿದ್ದೇನೆ. ಆದರೆ ಇದರ ಬಗ್ಗೆ ಯಾವ ಗಮನವನ್ನೂ ಕೊಟ್ಟಿಲ್ಲ. ೧೨ನೇ ತಾರೀಖು ಇದು ನಡೆದಿದೆ. ತಾವು ಇದನ್ನು ದಯವಿಟ್ಟು ಪರಿಶೀಲಿಸಿ ನೋಡಬೇಕಾಗಿದೆ.

೧-೦೦ ಪಿ.ಎಂ.

೧೨ನೇ ತಾರೀಖು ನಾನು ಬರುವಾಗ ಅಲ್ಲಿಯ ಅರಣ್ಯಾಧಿಕಾರಿಗಳಿಗೆ ಮತ್ತು ತಹಸೀಲ್ದಾರ್ ರವರಿಗೂ ಫೋನ್ ಮಾಡಿದೆ. ಮೊಕ್ತಾ ಮೆಸೇಜನ್ನು ಕಳುಹಿಸಿದ್ದೇನೆ. ಆದರೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅಲ್ಲಿ ಈ ಆನೆಗಳ ಕಾಟದಿಂದ ತೆಂಗಿನ ಗಿಡ, ಕಬ್ಬಿನ ಬೆಳೆ ಹಾಗೂ ಭತ್ತದ ಗದ್ದೆಗಳಿಗೆ ಬಹಳ ಹಾನಿಯಾಗಿದೆ. ನೀರಾವರಿ ಪ್ರದೇಶದಲ್ಲಿ ಈ ರೀತಿ ಭತ್ತದ ಬೆಳೆ ಹಾನಿಯಾಗಿದ್ದರೆ ನಾನು ಕೇಳುತ್ತಿರಲಿಲ್ಲ. ಏಕೆಂದರೆ, ಒಂದು ಸಾರಿ ನಷ್ಟವಾದರೂ ಇನ್ನೊಂದು ಸಾರಿ ಬರುತ್ತದೆ. ಇದು ಮಳೆಯ ಆಶ್ರಯದಲ್ಲಿ ಬೆಳೆಯತಕ್ಕಂಥಾದ್ದು ಆದ್ದರಿಂದ ನಾನು ಪ್ರಶ್ನೆ ಮಾಡುತ್ತಿದ್ದೇನೆ.

ಅಧ್ಯಕ್ಷರು.—ತಾವು ಕ್ವಾರಿಫಿಕೇಷನ್ ಕೇಳಿ, ನಿಯಮಾವಳಿ ಪ್ರಕಾರ ಭಾಷಣ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಸಹ ನಾನು ನಿಮಗೆ ಜಾಸ್ತಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಹದೇವ್.—ಸ್ವಾಮಿ, ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಭಾಗದ ಜನರು ಈ ಬಗ್ಗೆ ಬಹಳ ನೊಂದಿರುವುದರಿಂದ ನಾನು ಅವರ ಪರವಾಗಿ ಈ ಸದನದ ಮುಂದೆ ಕೇಳುತ್ತಿದ್ದೇನೆ. ಆ ಜನಗಳು ಗುಡಿಸಲಿನಲ್ಲಿ ವಾಸ ಮಾಡತಕ್ಕಂತಹ ಜನ. ಈ ಬಗ್ಗೆ ಅರಣ್ಯ ಅಧಿಕಾರಿಗಳು ಸರಿಯಾಗಿ ಗಮನ ಇಡುತ್ತಿಲ್ಲ, ತಾತ್ಸಾರದಿಂದ ಇದ್ದಾರೆ. ಆದುದರಿಂದ ನಾನು ಹೇಳುತ್ತಿದ್ದೇನೆ. ನೀವು ಬಂಗಲೆಯಲ್ಲಿ ವಾಸ ಮಾಡತಕ್ಕಂತಹ ಜನ. ಗುಡಿಸಲಿನಲ್ಲಿ ವಾಸ ಮಾಡತಕ್ಕಂತಹ ಬಡ ಜನರ ಕಷ್ಟ ಸುಖಗಳು ನಿಮಗೆ ಹೇಗೆ ಗೊತ್ತಾಗುತ್ತದೆ ? ಅವರ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ನಾನು ಹೇಳುವುದೇನೆಂದರೆ ಅಲ್ಲಿರುವ ಕ್ರೂರ ಮೃಗಗಳ ಹಾವಳಿಯನ್ನು ತಪ್ಪಿಸಿ, ಆ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ, ಮಾನ್ಯ ಅರಣ್ಯ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ತಾವು ತೀವ್ರವಾಗಿ ಗಮನಹರಿಸಬೇಕು.

ಎರಡನೆಯದಾಗಿ ಆ ಪ್ರದೇಶದಲ್ಲಿ ತಾತ್ಕಾಲಿಕವಾಗಿಯಾದರೂ, ಆ ಕ್ರೂರ ಮೃಗಗಳ ಕಾಟ ತಪ್ಪುವ ತನಕ ಅರಣ್ಯ ಅಧಿಕಾರಿಗಳು ಹಾಗೂ ಅರಣ್ಯ ಸಚಿವರು ಬಂದು ವಾಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಬಿಳಿಗಿರಿರಂಗನಬೆಟ್ಟ ಆ ಭಾಗಗಳಲ್ಲೂ ಸಹ ಕ್ರೂರ ಮೃಗಗಳ ಕಾಟ ಜಾಸ್ತಿಯಾಗಿದೆ.

ಅಧ್ಯಕ್ಷರು.—ತಾವು ಕಳುಹಿಸಿರತಕ್ಕಂಥ ಸೂಚನೆ ನಂಜನಗೂಡಿಗೆ ಮಾತ್ರ ಸೀಮಿತವಾಗಿರುವುದರಿಂದ ಆ ಬಗ್ಗೆ ಮಾತ್ರ ಕೇಳಬೇಕು. ನೀವು ಅದನ್ನೆಲ್ಲಾ ಹೇಳುವುದಕ್ಕೆ ಹೋದರೆ ಸಕಲೇಶಪುರದ್ದು ಇನ್ನೊಬ್ಬರು ಕೇಳುವುದಕ್ಕೆ ಹೋಗುತ್ತಾರೆ. ಇದು ನಂಜನಗೂಡಿನ ವಿಷಯಕ್ಕೆ ಮಾತ್ರ ಸೀಮಿತವಾಗಿದೆ.

ಶ್ರೀ ಬಿ.ಎ. ಜೀವಿಜಯ (ಅರಣ್ಯ ಖಾತೆಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಅವರು ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಆಪಾದನೆ ಮಾಡಿದ್ದಾರೆ. ಅದರ ಬಗ್ಗೆ ನಾನು ಅಂಕಿಅಂಶಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಈ ಕ್ರೂರ ಮೃಗಗಳು ದನಕರುಗಳನ್ನು ತಿಂದು ಹಾಕಿರುವ ಪ್ರಕರಣಗಳ ಬಗ್ಗೆ ನಾವು ಎಷ್ಟು ಪ್ರಕರಣಗಳಲ್ಲಿ ಸಂಬಂಧಪಟ್ಟವರಿಗೆ ಪರಿಹಾರ ಕೊಟ್ಟಿದ್ದೇವೆ ಎಂಬುದನ್ನು ತಿಳಿಸಬಯಸುತ್ತೇನೆ. ೩೯ ಪ್ರಕರಣಗಳಲ್ಲಿ ೧೭,೭೫೦ ರೂಪಾಯಿ ಕೊಟ್ಟಿದ್ದೇವೆ. ಮತ್ತು ೬೯ ಪ್ರಕರಣಗಳಲ್ಲಿ ೩೧,೫೧೫ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ. ಇನ್ನು ೮ ಪ್ರಕರಣಗಳಲ್ಲಿ ೬,೮೫೩ ರೂಪಾಯಿ ಕೊಡಬೇಕು ಎಂದು ನಾವು ಆದೇಶ ಕೊಟ್ಟಿದ್ದೇವೆ. ಅರಣ್ಯ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಹೋಗಿದ್ದರೆ ಈ ರೀತಿಯಾಗಿ ಪರಿಹಾರ ಕೊಡುವುದಕ್ಕೆ ಆಗುತ್ತಿರಲಿಲ್ಲ. ಮತ್ತು ಇನ್ನೊಂದು ವಿಷಯ ಏನೆಂದರೆ ೩ ವರ್ಷದ ಹಿಂದೆ ತಾರಕಾಡ್ಯಾಂ ಹತ್ತಿರ ಒಂದು ಆನೆ ಒಬ್ಬ ವ್ಯಕ್ತಿಯನ್ನು ಕೊಂದಿದೆ. ಅಲ್ಲಿ ಆನೆಗಳ ಹಾವಳಿಯನ್ನು ತಡೆಗಟ್ಟಲಿಕೆ ಕ್ಯೂಸ್ಕರವಾಗಿ ೫ ಕಿಲೋ ಮೀಟರ್‌ನಷ್ಟು ಚರಂಡಿಯನ್ನು ೧ ಲಕ್ಷ ೫೦ ಸಾವಿರ ರೂಪಾಯಿಗಳ ಖರ್ಚಿನಲ್ಲಿ ಮಾಡಿದ್ದೇವೆ, ಈಗ ಮತ್ತೆ ೧ ಲಕ್ಷ ರೂಪಾಯಿ ಖರ್ಚು ಮಾಡಿ ೫ ಚರಂಡಿಯನ್ನು ತೋಡಿದ್ದೇವೆ. ಈ ರೀತಿಯಾಗಿ ಅರಣ್ಯಾಧಿಕಾರಿಗಳು ಕೆಲಸ ಮಾಡುತ್ತಾ ಇರುವುದರಿಂದ ಮಾನ್ಯ ಸದಸ್ಯರು ಅರಣ್ಯ ಅಧಿಕಾರಿಗಳು ಕೆಲಸ ಮಾಡುತ್ತಾ ಇಲ್ಲ ಎಂದು ಹೇಳತಕ್ಕಂತಹ ವಾದವನ್ನು ನಾನು ಒಪ್ಪುವುದಿಲ್ಲ. ಮಾನ್ಯ ಸದಸ್ಯರು ಹೇಳಿದರು ನಾನು ಒಂದು ಪಟ್ಟಿಯನ್ನು ಇದರ ಬಗ್ಗೆ ತಯಾರು ಮಾಡಿದ್ದೇನೆ ಎಂದು. ಅದನ್ನು ನನಗೆ ಕಳುಹಿಸಿಕೊಟ್ಟರೆ ನಾನು ನೋಡುತ್ತೇನೆ.

(ಶ್ರೀ ಎಂ. ಮಹದೇವ್ ಅವರು ಒಂದು ಪಟ್ಟಿಯನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿದರು)

ಅಧ್ಯಕ್ಷರು.—ಈ ಪಟ್ಟಿಯನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸುತ್ತೇನೆ. ಇದನ್ನು ಮಾನ್ಯ ಮಂತ್ರಿಗಳು ನೋಡಿ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತಾರೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

(ii) Death of Smt. Parvathi due to illegal abortion at Gonikoppal

SRI G.K. SUBBAIAH.—I call the attention of the Minister of State for Health to the death of Smt. B. M. Parvathi daughter of late Mennaiah of Hudikeri Village near Gonikoppal due to illegal abortion conducted by a private practitioner.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು).—ದಿನಾಂಕ ೫-೧-೧೯೮೫ರಂದು ೧ ಘಂಟೆ ಸುಮಾರಿನಲ್ಲಿ ದಿ|| ಮಣ್ಣಯ್ಯನವರ ಮಗಳು ಸುಮಾರು ೧೭ ವರ್ಷ ವಯಸ್ಸಿನ ಅವಿವಾಹಿತಳಾದ ಪಾರ್ವತಿ ಉರುಫ್ ವಾಣಿ ಎಂಬುವಳನ್ನು ೪ ದಿನಗಳಿಂದ ಜ್ವರ, ವಾಂತಿ ಭೇದಿ, ಹೊಟ್ಟೆನೋವು ಮತ್ತು ೨½ ತಿಂಗಳಿನಿಂದ ಋತು ಚಕ್ರ ನಿಂತಿರುವುದಾಗಿ, ಆಪೆಳ ಸಂಬಂಧಿ ಶ್ರೀ ಸೋಮಯ್ಯ ಮತ್ತು ಶ್ರೀ ಐ.ಎಂ. ಪಟ್ಟು ಎಂಬುವರು ಗೋಣಿಕೊಪ್ಪದ ಸಾರ್ವಜನಿಕ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಈ ಬಗ್ಗೆ ಪ್ರಶ್ನಿಸಲಾಗಿ, ಗೋಣಿಕೊಪ್ಪದಲ್ಲಿ ಖಾಸಗಿ ವೈದ್ಯರಾಗಿರುವ ಶ್ರೀ ಹೆಚ್. ಆರ್. ಮುದ್ದಣ್ಣ ಎಂಬುವರು, ಪ್ರೇರಿತ ಗರ್ಭಪಾತಕ್ಕಾಗಿ ಕೆಲವು ಗುಳಿಗೆಗಳನ್ನು ಕೊಟ್ಟರೆಂದು ತಿಳಿದು ಬಂದಿದೆ.

ರೋಗಿಯನ್ನು ಆಸ್ಪತ್ರೆಗೆ ಸೇರಿಸಿಕೊಳ್ಳುವಾಗ ಆಕೆಗೆ ಜ್ವರ ಮತ್ತು ಹೊಟ್ಟೆನೋವಿದ್ದು ಗಂಭೀರ ಸ್ಥಿತಿಯಲ್ಲಿದ್ದಳು ರಕ್ತ ಒತ್ತಡ ಕಡಿಮೆ ಇದ್ದು ಆಕೆಯ ಸ್ಥಿತಿ ಆಶಾದಾಯಕವಾಗಿರಲಿಲ್ಲ. ಗೋಣಿಕೊಪ್ಪದಲ್ಲಿರುವ ಮಹಿಳಾ ವೈದ್ಯರು ಪರೀಕ್ಷಿಸಿ ಸೆಪ್ಟಿಕೇಮಿಯಾದಿಂದ ನರಳುತ್ತಿದ್ದಾಳೆ (ಕೂಡಿದ ಪೆರಿಟಾನೈಟ್ಸ್ (ವಿಷಮ ದೇಹ) ಎಂಬುದಾಗಿ ಗುರುತಿಸಿ ಕೂಡಲೇ ಪೋಲೀಸ್‌ನವರಿಗೆ ತಿಳಿಸಿದರು.